# ಮೀನುಗಾರಿಕೆ ಇಲಾಖೆಯ ಕಾರ್ಯಚಟುವಟಿಕೆಗಳ ಸಂಕ್ಷಿಪ್ತ ವರದಿ

ಪೀಠಿಕೆ:-

1] ಯಾದಗಿರಿ ಜಿಲ್ಲೆಯ ಬರಗಾಲ ಪೀಡಿತ ಪ್ರದೇಶವಾಗಿದೆ. ಈ ಜಿಲ್ಲೆಯಲ್ಲಿ 2920.75 ಹೆಕ್ಟೇರ ಜಲ ಪ್ರದೇಶವನ್ನು ಅದರಲ್ಲಿ 2805 ಹೆಕ್ಟೇರ ಜಲಪ್ರದೇಶ ಮೀನುಗಾರಿಕೆ ಚಟುವಟಿಕೆಗಳನ್ನು ಕೈಕೊಳ್ಳಲು ಯೋಗ್ಯವಾಗಿದೆ. ಜಿಲ್ಲೆಯಲ್ಲಿ 71 ಕೆರೆಗಳು 02 ಜಲಾಶಯಗಳು ಮೀನುಕೃಷಿ ಕೈಕೊಳ್ಳಲು ಯೋಗ್ಯವಾಗಿದ್ದು, ಸದಾ ಕಾಲ ನೀರು ನಿಲ್ಲುವಂತವುಗಳಾಗಿವೆ.ಅಲ್ಲದೇ ಜಿಲ್ಲೆಯಲ್ಲಿ 04 ನದಿಗಳಾದ ಭೀಮಾ ಕೃಷ್ಣಾ ಹರಿಯುತ್ತಿದ್ದು, ಇವು ಸದಾಕಾಲ ಮೀನುಗಾರಿಕೆ ಚಟುವಟಿಕೆಗಳಿಗೆ ಯೋಗ್ಯವಾಗಿದೆ. ಈ ಜಿಲ್ಲೆಯಲ್ಲಿ 5 ಮೀನುಗಾರಿಕೆ ಸಂಘಗಳಿದ್ದು, 5 ಸಂಘಗಳು ಕಾರ್ಯನಿರತವಾಗಿವೆ. ಈ ಸಂಘಗಳು ಇಲಾಖೆಯಿಂದ ಕೆರೆ, ನದಿ, ಜಲಾಶಯಗಳನ್ನು ಗುತ್ತಿಗೆ ಮೇಲೆ ಪಡೆದು ಮೀನು ಕೃಷಿ ಕೈಕೊಂಡು ಅದರ ಸದಸ್ಯರ ಆರ್ಥಿಕ ಸ್ಥಿತಿ ಸುಧಾರಿಸುವಲ್ಲಿ ಕಾರ್ಯನಿರತವಾಗಿವೆ.

ಈ ಜಿಲ್ಲೆಯಲ್ಲಿ ಮೂರು ತಾಲ್ಲೂಕುಗಳಿದ್ದು, ಅವುಗಳಿಗೆ ಮೂರು ತಾಲ್ಲೂಕು ಮಟ್ಟದ ಅಧಿಕಾರಿಗಳಿದ್ದು, ಮೂರು ತಾಲ್ಲೂಕುಗಳಿಗೆ ಮೀನುಗಾರಿಕೆ ಚಟುವಟಿಕೆ ಹಾಗೂ ಸರ್ಕಾರದ ಯೋಜನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ಜಿಲ್ಲಾ ಪಂಚಾಯತ ಯಾದಗಿರಿ ಇವರಿಗೆ ನೆರವಾಗುತ್ತಿದ್ದಾರೆ. ಶಹಾಪುರ,ಸುರಪುರ,ಯಾದಗಿರಿ ಗಳಲ್ಲಿರುವ ಮೀನುಗಾರಿಕೆ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳು, ಜಿಲ್ಲೆಯಲ್ಲಿನ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದಾರೆ. ಜಿಲ್ಲೆಯ ಮೀನುಗಾರಿಕೆ ಚಟುವಟಿಕೆಗಳ ಉಸ್ತುವಾರಿಗೆ ಒಂದು ಜಿಲ್ಲಾ ಮಟ್ಟದ ಕಛೇರಿಯ ಯಾದಗಿರಿದಲ್ಲಿ ಕಾರ್ಯನಿರತವಾಗಿದೆ.

ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು,
ಜಿಲ್ಲಾ ಪಂಚಾಯತ ಯಾದಗಿರಿ.

-2-ನೇ ಪುಟಕ್ಕೆ

## ಮೀನುಗಾರಿಕೆ ಇಲಾಖೆಯ 2009-10ನೇ ಸಾಲಿನ ಅನುದಾನದ ಹಾಗೂ ಯೋಜನೆಗಳ ವಿವರ

1] ಮೀನು ಮರಿ ಉತ್ಪಾದನೆ ಮತ್ತು ಸಾಕಾಣಿಕೆ ಹಂಚಿಕೆ: [2405-00-101-0-72] ಅನುದಾನ ರೂ. 0.891 ಲಕ್ಷ

2009-10ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ರೂ. 0.981 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ ರೂ. 0.891 ಲಕ್ಷ ಬಿಡುಗಡೆಯಾಗಿದ್ದು, ಈ ಮೊತ್ತದಲ್ಲಿ ರೂ. 0.891 ಲಕ್ಷ ಬಳಸಿಕೊಂಡು 2.8 ಲಕ್ಷ ಮೀನುಮರಿಗಳನ್ನು ಸರಬರಾಜು ಮಾಡಲಾಗಿದೆ.

2] ಮೀನು ಮಾರುಕಟ್ಟೆ ಮತ್ತು ಮತ್ಸ್ಯ ವಾಹಿನಿಗೆ ಸಹಾಯಧನ: [2405-00-105-0-08] ಅನುದಾನ ರೂ. 0.16 ಲಕ್ಷ

ಈ ಯೋಜನೆಯಲ್ಲಿ 2009-10ನೇ ಸಾಲಿನಲ್ಲಿ ರೂ.0.16 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ರೂ. 0.16 ಲಕ್ಷಗಳನ್ನು ಬಳಸಿಕೊಂಡು (8) ಫಲಾನುಭವಿಗಳಿಗೆ ಮೀನು ಮಾರುಕಟ್ಟೆಗಾಗಿ ಬಲೆ ಮತ್ತು ಸೈಕಲ್ ಖರೀದಿಸಲು ಸಹಾಯಧನವನ್ನು ನೀಡಲಾಗಿದೆ.

3] ಪ್ರದರ್ಶನ ಮತ್ತು ತರಬೇತಿ:- (2405-00-800-0-73) ಅನುದಾನ ರೂ. 0.15 ಲಕ್ಷ

ಈ ಯೋಜನೆ ಅನುಷ್ಠಾನಕ್ಕಾಗಿ 2009-10ನೇ ಸಾಲಿನಲ್ಲಿ ರೂ. 0.15 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ಈ ಹಣವನ್ನು 15 ಜನ ಮೀನು ಕೃಷಿಕರಿಗೆ ತರಬೇತಿ ನೀಡಲು ಬಿಡುಗಡೆ ಮಾಡಲಾಗಿದೆ.

4] ವಿಶೇಷ ಘಟಕ ಯೋಜನೆ: (2225-0-800-0-04) ಅನುದಾನ ರೂ.0.61 ಲಕ್ಷ

ಈ ಯೋಜನೆಯನ್ನು ಮೀನುಗಾರಿಕೆ ಚಟುವಟಿಕೆ ಕಾರ್ಯಕ್ರಮಗಳಿಗಾಗಿ ರೂ. 0.61 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇದರಲ್ಲಿ 0.598 ಲಕ್ಷ ಅನುದಾನವನ್ನು ಬಳಸಿಕೊಂಡು 12 ಜನ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಸೈಕಲ್ ಮತ್ತು ಬಲೆಗಳನ್ನು ಸರಬರಾಜು ಮಾಡಲಾಗಿದೆ.

## ಮೀನುಗಾರಿಕೆ ಇಲಾಖೆಯ 2010-11ನೇ ಮತ್ತು 2011-12ನೇ ಸಾಲಿನ ಅನುದಾನದ ಹಾಗೂ ಯೋಜನೆಗಳ ವಿವರ

1] **ಮೀನುಮರಿ ಉತ್ಪಾದನೆ ಸಾಕಾಣಿಕೆ ಮತ್ತು ಹಂಚಿಕೆ:2405-00-101-0-72 : ಅನುದಾನ ರೂ.1.00 ಲಕ್ಷ.**

2010-11ನೇ ಸಾಲಿಗೆ ಈ ಯೋಜನೆಯಡಿ ರೂ. 1.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ ರೂ. 1.00 ಲಕ್ಷ ಬಿಡುಗಡೆಯಾಗಿದ್ದು ಈ ಮೊತ್ತದಲ್ಲಿ ರೂ.1.00 ಲಕ್ಷ ಬಳಸಿಕೊಂಡು ಇಲಾಖೆಯ ಕೆರೆಗಳನ್ನು ಗುತ್ತಿಗೆ ಹಾಗೂ ಟೆಂಡರ ಮೂಲಕ ಪಡೆದಿರುವ ಮೀನುಗಾರಿಕೆ ಸಹಕಾರ ಸಂಘಗಳು ಹಾಗೂ ಮೀನುಗಾರರಿಗೆ 3.00 ಲಕ್ಷ ಮೀನುಮರಿ ಸರಬರಾಜು ಮಾಡಲಾಗಿದೆ.

2] **ಮೀನುಮಾರುಕಟ್ಟೆ ಮತ್ತು ಮತ್ಸ್ಯವಾಹಿನಿ : 2405-00-105-0-08 : ಅನುದಾನ ರೂ. 0.12 ಲಕ್ಷ**

2010-11ನೇ ಸಾಲಿಗೆ ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ರೂ.0.12 ಲಕ್ಷ ಅನುದಾನವನ್ನು ಬಿಡುಗಡೆ ಗೊಳಿಸಲಾಗಿತ್ತು. ಇದರಲ್ಲಿ ರೂ. 0.12 ಲಕ್ಷ ಗಳನ್ನು ಬಳಸಿಕೊಂಡು 6 ಜನ ಫಲಾನುಭವಿಗಳಿಗೆ ಶೇ 50% ವ್ಯಕ್ತಿಗತ ರೂ. 2000/- ರಂತೆ ಸೈಕಲ್ ಹಾಗೂ ಶೀತಲ ಪೆಟ್ಟಿಗೆಗಳನ್ನು ಖರೀದಿಸಲು ಸಹಾಯ ಧನವನ್ನು ನೀಡಲಾಗಿದೆ.

3] **ಪ್ರದರ್ಶನ ಮತ್ತು ತರಬೇತಿ ; 2405-00-800-0-73 : ಅನುದಾನ ರೂ. 0.15 ಲಕ್ಷ.**

2010-11ನೇ ಸಾಲಿಗೆ ಈ ಯೋಜನೆಯಡಿ ರೂ. 0.15 ಲಕ್ಷ ಅನುದಾನವನ್ನು ಬಿಡುಗಡೆ ಗೊಳಿಸಲಾಗಿತ್ತು. ಇದರಲ್ಲಿ ರೂ. 5000/- ಗಳನ್ನು ಬಳಸಿಕೊಂಡು ದಿನಾಂಕ: 09,10,11-1-2011 ರಂದು ಶಹಾಪುರ ಭಿಮರಾಯನ ಗುಡಿಯಲ್ಲಿ ಏರ್ಪಡಿಸಲಾದ ಕೃಷಿಮೇಳ ಕಾರ್ಯಕ್ರಮಕ್ಕಾಗಿ ಬಳಸಲಾಗಿದೆ. ಹಾಗೂ ರೂ.0.10 ಲಕ್ಷ ಅನುದಾನವನ್ನು ದಿನಾಂಕ: 18 ರಿಂದ 21 ಫೆಬ್ರುವರಿ 2011ರ ವರಗೆ ಬೆಂಗಳೂರು ಅರಮನೆ ಮೈದಾನದಲ್ಲಿ ಏರ್ಪಡಿಸಲಾದ ಮತ್ಸ್ಯಮೇಳ ಕಾರ್ಯಕ್ರಮಕ್ಕೆ ಮೀನುಗಾರಿಕೆ ಇಲಾಖೆ ಯಾದಗಿರ ಜಿಲ್ಲೆಯಿಂದ 50 ಜನ ಫಲಾನುಭವಿಗಳನ್ನು ಕರೆದುಕೊಂಡು ಹೋಗಲಾಗಿತ್ತು.

1] **ಮೀನುಮರಿ ಖರೀದಿಸಲು ಸಹಾಯ :2405-00-101-0-28 : ಅನುದಾನ ರೂ.1.00 ಲಕ್ಷ.**

2011-12ನೇ ಸಾಲಿಗೆ ಈ ಯೋಜನೆಯಡಿ ರೂ. 24.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ ರೂ. 1.00 ಲಕ್ಷ ಬಿಡುಗಡೆಯಾಗಿದ್ದು.ಈ ಮೊತ್ತದಲ್ಲಿ ರೂ.1.00 ಲಕ್ಷ ಬಳಸಿಕೊಂಡು ಇಲಾಖೆಯ ಕೆರೆಗಳನ್ನು ಗುತ್ತಿಗೆ ಹಾಗೂ ಟೆಂಡರ ಮೂಲಕ ಪಡೆದಿರುವ ಮೀನುಗಾರಿಕೆ ಸಹಕಾರ ಸಂಘಗಳು ಹಾಗೂ ಮೀನುಗಾರರಿಗೆ ಶೇ. 50% ರಷ್ಟು ವ್ಯಕ್ತಿಗತ ಗರಿಷ್ಟ ರೂ.5000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಟ ರೂ.20000/- ಮಿತಿಗೊಳಪಟ್ಟು ಸಹಾಯಧನ ನೀಡಲಾಗುವುದು.

2] **ಮೀನುಮಾರುಕಟ್ಟೆ ಮತ್ತು ಮತ್ಸ್ಯವಾಹಿನಿ : 2405-00-101-0-30 : ಅನುದಾನ ರೂ. 2.00 ಲಕ್ಷ**

2011-12 ನೇ ಸಾಲಿಗೆ ರೂ.3.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿತ್ತು ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ರೂ.2.00 ಲಕ್ಷ ಅನುದಾನವನ್ನು ಬಿಡುಗಡೆ ಗೊಳಿಸಲಾಗಿದೆ. ಇದರಲ್ಲಿ ರೂ. 2.00 ಲಕ್ಷಗಳನ್ನು ಬಳಸಿಕೊಂಡು ಒಳನಾಡಿನ ನಿರುದ್ಯೋಗಿ ಮೀನುಗಾರರಿಗೆ, ಮೀನುಗಾರರ ಮಹಿಳೆಯರಿಗೆ, ದ್ವಿಚಕ್ರ ವಾಹನ ಖರೀದಿಸಲು ಶೇ. 25% ಗರಿಷ್ಟ 10000/- ಗಳ ಸಹಾಯ ಧನ ನೀಡಲಾಗುವದು.

-4-

3] ಪ್ರದರ್ಶನ ಮತ್ತು ತರಬೇತಿ ; 2405-00-101-0-32 : ಅನುದಾನ ರೂ. 0.50 ಲಕ್ಷ.

2011-12ನೇ ಸಾಲಿಗೆ ಈ ಯೋಜನೆಯಡಿ ರೂ. 2.00 ಲಕ್ಷ ಅನುದಾನವನ್ನು ನಿಗದಿ ಪಡಿಸಲಾಗಿತ್ತು. ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ರೂ.0.50 ಲಕ್ಷ ಅನುದಾನವನ್ನು ಬಿಡುಗಡೆ ಗೊಳಿಸಲಾಗಿದೆ. ಇದರಲ್ಲಿ ರೂ.0.50 ಲಕ್ಷ ಅನುದಾನವನ್ನು ಬಳಸಿಕೊಂಡು ಇಲಾಖೆಯ ಸೌಲಭ್ಯಗಳ ಮಾಹಿತಿಯನ್ನು ಜಿಲ್ಲೆಯ ಸಾರ್ವಜನಿಕರಿಗೆ ,ಮೀನುಗಾರರಿಗೆ, ಮೀನುಕೃಷಿಕರಿಗೆ ತಿಳಿಯಪಡಿಸಲು ಇಲಾಖೆ ಯೋಜನೆಗಳ ಕೈಪಿಗಳನ್ನು ತಯಾರಿಸಲಾಗುವದು ಅಥವಾ ಪ್ರಚಾರ ಸಾಮಗ್ರಿಗಳನ್ನು ಖರೀದಿಸಲಾಗುವದು.

4] ವಿಶೇಷ ಘಟಕ ಯೋಜನೆ : 2225-00-101-0-64 : ಅನುದಾನ ರೂ.3.00 ಲಕ್ಷ (ತಾಲೂಕು ಪಂಚಾಯತ ಯೋಜನೆ)

2011-12ನೇ ಸಾಲಿಗೆ ಈ ಯೋಜನೆಯಡಿ ರೂ. 3.00 ಲಕ್ಷ ಅನುದಾನವನ್ನು ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ಬಿಡುಗಡೆ ಗೊಳಿಸಲಾಗಿದೆ. ಇದರಲ್ಲಿ ರೂ. 3.00 ಲಕ್ಷ ಅನುದಾನವನ್ನು ಬಳಸಿಕೊಂಡು ಪರಿಶಿಷ್ಟ ಜಾತಿಯ ಮೀನುಗಾರ ಫಲಾನುಭವಿಗಳಿಗೆ ಶೇ.100% ವ್ಯಕ್ತಿಗತ ರೂ. 5000/- ರಂತೆ ಸೈಕಲ್ ಹಾಗೂ ಬಲೆಗಳನ್ನು ಖರೀದಿಸಲು ಸಹಾಯ ಧನವನ್ನು ನೀಡಲಾಗಿದೆ.

ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು,
ಜಿಲ್ಲಾ ಪಂಚಾಯತ ಯಾದಗಿರ.